**ದಿನಾಂಕ 24.01.2025 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**<u>ಪಾಟೀಸವಾಲುಃ 5 ನೇ ಪ್ರತಿವಾದಿಯ ಪರವಾಗಿ ಶ್ರೀ ಬಿ.ಎನ್.ಎ. ವಕೀಲರಿಂದಃ</u>**

1. ದಾವಾ ಐಟಂ ನಂ.1 ಮತ್ತು 2 ರ ಆಸ್ತಿಯು ಒಣಗಿದ ನೆಲಗಳು ಎಂದರೆ ಸರಿ, ಅದಕ್ಕೆ ನೀರಿನ ಆಶ್ರಯ ಇಲ್ಲ ಎಂದರೆ ಸರಿಯಲ್ಲ, ವಾಣಿವಿಲಾಸ ಸಾಗರ ಜಾಲಾಶಯದ ಆಶ್ರಯ ಇದೆ ಎಂದು ನುಡಿಯುತ್ತಾರೆ. ನೀರಿನ ಆಶ್ರಯ ಇರುವ ಬಗ್ಗೆ ದಾಖಲಾತಿಗಳು ಹಾಜರುಪಡಿಸಿಲ್ಲ ಎಂದು ನುಡಿಯುತ್ತಾರೆ. ಅದು ಫಲವತ್ತಾದ ಜಮೀನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಜಯ್ ಕುಮಾರ್ ರವರು ದಾವಾ ಐಟಂ ನಂ.1 ಮತ್ತು 2 ರ ಆಸ್ತಿಗಳಲ್ಲಿ ಎಂದಿಗೂ ವ್ಯವಸಾಯ ಮಾಡಿಲ್ಲ ಎಂದರೆ ಸರಿಯಲ್ಲ. ಅವರ ಜೀವಮಾನದಲ್ಲಿ ಯಾವುದೇ ಫಲಗಳನ್ನು ಪಡೆದಿಲ್ಲ ಎಂದರೆ ಸರಿಯಲ್ಲ. ಮೈಸೂರ್ ನಲ್ಲಿ ವಿಜಯ್ ಕುಮಾರ್ ರವರು Automative Axel India Ltd., ನಲ್ಲಿ ಕೆಲಸದಲ್ಲಿ ಇದ್ದರು ಎಂದರೆ ಸರಿ, ಆದರೆ ಅಲ್ಲಿಯ ಸಂಬಳ ಅವರ ಜೀವನಕ್ಕೆ ಸಾಕಾಗುತ್ತಿರಲಿಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸಾಕ್ಷಿಯು ನನಗೆ ವಾದಿ ಮತ್ತು ಪ್ರತಿವಾದಿ ಇಬ್ಬರೂ ಸಂಬಂಧಿಕರೇ ಆಗಬೇಕು ಎಂದು ನುಡಿಯುತ್ತಾರೆ.
2. ನಾನು ವಾದಿಯ ತಂದೆ ವಿಜಯ್ ಕುಮಾರ್ ರವರ ಅಣ್ಣನ ಮಗಳನ್ನು ಮದುವೆಯಾಗಿದ್ದೇನೆ ಎಂದರೆ ಸರಿ. ವಿಜಯ್ ಕುಮಾರ್ ರವರು ಮೈಸೂರಿನಲ್ಲಿ 1996-97 ರಿಂದ 2009 ರವರೆಗೂ ಕೆಲಸ ಮಾಡುತ್ತಿದ್ದರು ಎಂದರೆ ಸರಿ, ನಂತರ 2010-2017 ರವರೆಗೂ ತುಮಕೂರಿನ ಶ್ರೀದೇವಿ ಮತ್ತು ಆರ್ಯ ಭಾರತಿ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅಲ್ಲಿಯೂ ಸಹ ಅವರಿಗೆ ಒಳ್ಳೆಯ ಸಂಬಳ ಬರುತ್ತಿತ್ತು ಎಂದರೆ ಸರಿಯಲ್ಲ. ಈ ಎಲ್ಲಾ ಸಂಬಳದಲ್ಲಿ ಅವರು ಉಳಿಸಿದಂತ ಹಣದಲ್ಲಿ 2017 ರಲ್ಲಿ ವಿಜಯ್ ಕುಮಾರ್ ರವರು 01 ಸೈಟನ್ನು ಶಿರಾ ಹನುಮಂತನಗರದಲ್ಲಿ ಖರೀದಿ ಮಾಡಿದ್ದರು ಎಂದರೆ ಸಾಕ್ಷಿಯು ಅವರು ಕಬ್ಬು ಮತ್ತು ಇತರೆ ಬೆಳೆಗಳನ್ನು ಬೆಳೆದು ಬಂದ ಹಣದಿಂದ ಖರೀದಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಈ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.4 ರ ಆಸ್ತಿಯು ವಿಜಯ್ ಕುಮಾರ್ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಪಿತ್ರಾರ್ಜಿತ ಆಸ್ತಿಯಿಂದ

ಯಾವುದೇ ಆದಾಯ ಗಳಿಸಿ ಸದರಿ ಶಿರಾದಲ್ಲಿ ಇರುವ ಆಸ್ತಿ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ಅವರು ಗುತ್ತಿಗೆಗೆ ಕೊಟ್ಟು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ದಾವಾ ಐಟಂ ನಂ.4 ರ ಆಸ್ತಿಯು ವಿಜಯ್ ಕುಮಾರ್ ರವರು ಪ್ರತ್ಯೇಕ ಒಡತನದಲ್ಲಿ ಇತ್ತು ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸವಾಗಿದೆ ಎಂದು ನಾನು ಸಾಕ್ಷಿ ಹೇಳಲು ಬಂದಿದ್ದೇನೆ ಎಂದು ನುಡಿಯುತ್ತಾರೆ.

3. ವಿಜಯ್ ಕುಮಾರ್ ರವರು ಕಿಡ್ನಿ ವೈಫಲ್ಯ ಮತ್ತು ಇನ್ನಿತರ ಖಾಯಿಲೆಗಳಿಂದ ಬಳಲುತ್ತಿದ್ದರು ಎಂದರೆ ಸರಿ. ವಿಜಯ್ ಕುಮಾರ್ ರವರು ದಾವಾ ಐಟಂ ನಂ.4 ರಲ್ಲಿ ಮನೆಯನ್ನು ತಮ್ಮ ಸ್ವಂತ ಸಂಪಾದನೆಯಿಂದ ಕಟ್ಟಿದ್ದರು ಎಂದರೆ ಸರಿಯಲ್ಲ. ಅವರನ್ನು ಅವರ ಹೆಂಡತಿ ಮಕ್ಕಳು ನೋಡಿಕೊಳ್ಳದೇ ಇರುವ ಕಾರಣ 2 ನೇ ಪ್ರತಿವಾದಿಯ ಹಾರೈಕೆಯಲ್ಲಿ ಇದ್ದರು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯೇ ಕೊನೆಯವರೆಗೂ ವಿಜಯ್ ಕುಮಾರ್ ರವರ ಹಾರೈಕೆ ಮಾಡಿ ನೋಡಿಕೊಂಡಿದ್ದರು ಎಂದರೆ ಸರಿಯಲ್ಲ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ವಿಜಯ್ ಕುಮಾರ್ ರವರಿಗೆ ಮಾಡಿದ ಹಾರೈಕೆಯ ಕಾರಣ ಅವರಿಗೆ ದಾವಾ ಐಟಂ ನಂ.4 ರ ಆಸ್ತಿಯು ದಾನವಾಗಿ ಕೊಟ್ಟಿದ್ದಾರೆ ಎಂದರೆ ಸಾಕ್ಷಿಯು 2 ನೇ ಪ್ರತಿವಾದಿ ಒಳಗೊಳಗೆ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಎಲ್ಲಾ ವಿಷಯಗಳು ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.4 ರ ಆಸ್ತಿಯು 2 ನೇ ಪ್ರತಿವಾದಿಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. 2 ನೇ ಪ್ರತಿವಾದಿಯು ಸದರಿ ಆಸ್ತಿಯನ್ನು 5 ನೇ ಪ್ರತಿವಾದಿಗೆ 2021 ರಲ್ಲಿ ತಮ್ಮ ವಯಕ್ತಿಕ ಸಮಸ್ಯೆಗಳಿಗೆ ಮಾರಾಟ ಮಾಡಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ವಾದಿಗೆ ತಿಳಿಯದಂತೆ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. 5 ನೇ ಪ್ರತಿವಾದಿಯು ಖರೀದಿ ಮಾಡಿದ ನಂತರ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿಯು ವಾದಿಯು ಸಹಿ ಮಾಡದೇ ಇದ್ದರೂ ಸಹ ಮಾರಾಟ ಮಾಡಿಕೊಂಡು ಸ್ವಾಧೀನದಲ್ಲಿ ಇದ್ದಾರೆ ಎಂದು ನುಡಿಯುತ್ತಾರೆ. ಖರೀದಿ ಮಾಡಿದ ನಂತರ ಎಲ್ಲಾ ದಾಖಲಾತಿಗಳು 5 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಒಳಗಿಂದೊಳಗೆ ಮಾಡಿಕೊಂಡ ಕಾರಣ ಅವರ ಹೆಸರಿಗೆ ಇದೆ ಎಂದು

ನುಡಿಯುತ್ತಾರೆ. 5 ನೇ ಪ್ರತಿವಾದಿಯು ಯಾವುದೇ ಮೋಸದಿಂದ ಖರೀದಿ ಮಾಡಿಲ್ಲ ಎಂದರೆ ಸರಿಯಲ್ಲ. ವಿಜಯ್ ಕುಮಾರ್ ಮಾನಸಿಕ ಅಸ್ವಸ್ಥನಾಗಿದ್ದಾಗ ಬರೆಸಿಕೊಂಡಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಮಾಣ ಪತ್ರದಲ್ಲಿ ಇರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್ ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ,**

**ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ, ಶಿರಾ.**